ಎಂದು ಗಡಸು ಧ್ವನಿಯಲ್ಲಿ ವಿಚಾರಿಸುತ್ತಾ ಬಾಗಿಲು ತೆರೆದರು. ಕೆಂಪು ಕಣ್ಣುಗಳು, ಉಟ್ಟದ್ದು ತೊಡೆ ಮೇಲೆ ಕಟ್ಟಿಕೊಂಡ ಪಂಚೆ ಮಾತ್ರ. ಅವರನ್ನು ನೋಡಿ ಸೋದರಳಿಯನಿಗೆ ಹೆದರಿಕೆ ಶುರು. ಮನೆಯೊಳಗೆ ಹೋದದ್ದಾಯಿತು. ತಾನು ಅನುವಾದಿಸಿದ ಕಥೆಯನ್ನು ಗಂಗಾಧರನ್ ಅವರ ಮುಂದೆ ಇಟ್ಟದ್ದೂ ಆಯಿತು. ಅದನ್ನು ನೋಡಿ ಅವರು ಮಾತನಾಡದೆ ಎದ್ದು ಒಳಗೆ ಹೋದರು. ಮತ್ತೆ ಹೊರಗೆ ಬಂದಾಗ ಅವರ ಕೈಯಲ್ಲಿ ಸ್ಕೇಲ್! ನಮಗೆ ಉಳಿಗಾಲವಿಲ್ಲವೆಂಬ ಭಯ ಇವರಿಬ್ಬರಿಗೆ. ಗಂಟಲು ಪಸೆ ಆರಿತು. ಕುಡಿಯಲು ನೀರು ಕೇಳುವ ಧೈರ್ಯವಿಲ್ಲ. ಲೇಖಕ ಎರಡೂ ಕಥೆಗಳನ್ನು ಅಕ್ಕಪಕ್ಕವಿಟ್ಟು ಸ್ಕೇಲ್‌ನಿಂದ ಅಳೆದರು. ತೃಪ್ತಿಯ ಮುಖಭಾವ ತೋರಿದರು! ಈ ಪರಿಯ ಅನುವಾದದ ಮೌಲ್ಯಮಾಪನವೂ ಇರುತ್ತೆ ಎಂದಾಯಿತು.

ಮೂಲದ ನಿಷ್ಠೆ ಎನ್ನುವುದು ಪಠ್ಯದ ಕುರಿತಾಗಿ ಇರುತ್ತದೆ, ಅನುವಾದ ಲಕ್ಷ್ಯ ಭಾಷೆಯ ಜಾಯಮಾನಕ್ಕೆ ತಕ್ಕಂತೆ ಇರಬೇಕು ಎನ್ನುವುದು ಅನುವಾದದ ನಿಯಮ. ಆದರೆ ಅನುವಾದಕ ಮೂಲಭಾಷೆಗೆ ನಿಷ್ಠನಾಗಿ ಅನುವಾದಿಸಿದರೆ ಅದರ ಫಲಿತಾಂಶ ಏನಾಗಬಹುದು? ಅನುವಾದ ಕೃತಕವಾಗುವುದು. ಅಂತಹವರೂ ನಮ್ಮೊಂದಿಗೆ ಇದ್ದಾರೆ ಎಂದರು ಗಂಗಾಧರನ್. ಅನುವಾದದಲ್ಲಿ ಭಾಷೆಯ ತೊಡಕುಗಳ ವಿಚಾರಕ್ಕೆ ಬಂದರೆ, ಹಳೆ ಕಾವ್ಯ, ಗದ್ಯ ಇತ್ಯಾದಿಗಳಲ್ಲಿ ಈಗ ಬಳಕೆಯಲ್ಲಿ ಇಲ್ಲದ ಪದಗಳು ಕಂಡುಬರುವುದು ಸಾಮಾನ್ಯ. ಈ ರೀತಿಯ ಪಠ್ಯವನ್ನು ಅನುವಾದಕ್ಕೆ ಕೈಗೆತ್ತಿಕೊಂಡಾಗ ವಿದ್ವಾಂಸರ ಮಾರ್ಗದರ್ಶನ ಬೇಕಾಗುತ್ತದೆ. ಯಾಕೆಂದರೆ ಓರ್ವ ಪ್ರತಿಭಾವಂತ ಅನುವಾದಕ ಸಾಹಿತ್ಯ ವಿದ್ಯಾರ್ಥಿಯೇ ಆಗಿರಬೇಕಿಲ್ಲ. ಇನ್ನು ಕೆಲವೊಮ್ಮೆ ಕಥೆ, ಕಾದಂಬರಿಗಳಲ್ಲಿ ಉಲ್ಲೇಖವಾಗುವ ಹಕ್ಕಿ, ಗಿಡ, ಹೂ, ಹಣ್ಣುಗಳು ಆಯಾ ಪ್ರದೇಶಕ್ಕೆ ಸೀಮಿತವಾಗಿರುವುದರಿಂದ ಬೇರೆ ಭಾಷೆಗಳಲ್ಲಿ ಅವುಗಳನ್ನು ಮೂಲ ಹೆಸರಿನಲ್ಲಿಯೇ ಉದಾಹರಣೆಗೆ ಚೆಕ್ಕಿಪೂ, ಕಾಸರಗ, ನೀರಮಾದಳ ಇತ್ಯಾದಿಯಾಗಿ ಉಲ್ಲೇಖಿಸಬಹುದು. ಒಂದೇ ಪದ ಎರಡು ಭಾಷೆಗಳಲ್ಲಿ ಎರಡು ವಿಭಿನ್ನ ಅರ್ಥವನ್ನು ಹೊಂದಿರುವ ಸ್ವಾರಸ್ಯ, ಅದರಿಂದ ಸೃಷ್ಟಿಯಾಗುವ ಗೊಂದಲವನ್ನು ಗಂಗಾಧರನ್ ವಿವರಿಸುತ್ತಿದ್ದರೆ ನಗೆ ಉಕ್ಕಿ ಬರುತ್ತಿತ್ತು. ಮಲಯಾಳಂ ಮತ್ತು ಕನ್ನಡ ಭಾಷೆಯಲ್ಲಿ ತೋರಿಕೆಗೆ ಒಂದೇ ರೀತಿಯದ್ದಾಗಿರುವ ಅನೇಕ ಪದಗಳು ಇವೆ. ಅವುಗಳ ಅರ್ಥ ಮಾತ್ರ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ. ಅಂತಹ ಪದಗಳ ಒಂದು ಪಟ್ಟಿಯನ್ನೇ ತಯಾರಿಸಿ ತಂದಿದ್ದರು ಗಂಗಾಧರನ್. ನಿರೂಪಣೆ(ಮ)= ವಿಮರ್ಶೆ(ಕ), ಸಂಸಾರ(ಮ)= ಮಾತು(ಕ), ಅವಕಾಶಂ(ಮ)=ಹಕ್ಕು(ಕ), ಚಳಿ(ಮ)=ಕೆಸರು(ಕ), ಗೋಷ್ಠಿ(ಮ)=ಚೇಷ್ಟೆ(ಕ), ನರಿ(ಮ)=ಹುಲಿ(ಕ). ಈ ಪದಬಳಕೆಯನ್ನು ಸರಿಯಾಗಿ ತಿಳಿದುಕೊಳ್ಳದೆ ತನ್ನಿಂದ ನಡೆದ ಪ್ರಮಾದವೊಂದನ್ನು ವಿವರಿಸುತ್ತಾ ಗಂಗಾಧರ್ ಹೇಳಿದ್ದು: "ಒಮ್ಮೆ ವೈದ್ಯೋಪಚಾರದ ಕುರಿತು ಲೇಖನ ಬರೆಯುವಾಗ ನಾನು 'ಕರುಳು'ಗೆ ಸಂಬಂಧಿಸಿದ ರೋಗಗಳನ್ನು ತಿಳಿಸಿದೆ. ಆಮೇಲೆ ನನಗೆ ಗೊತ್ತಾಯಿತು, 'ಕರುಳು' ಎಂದರೆ ಮಲಯಾಳಂ ಭಾಷೆಯಲ್ಲಿ 'ಪಿತ್ತಜನಕಾಂಗ', ಕನ್ನಡದ 'ಕರುಳು' ಅಲ್ಲ. ನಾನು ಪಿತ್ತಜನಕಾಂಗದ ಕಾಯಿಲೆಗಳನ್ನು ಕರುಳಿಗೆ ವರ್ಗಾಯಿಸಿ ಬಿಟ್ಟಿದ್ದೆ!" ಇದೇ ರೀತಿ ಬಹಳ ಹಿಂದೆ ವಾಕ್ಯರಚನೆಯಲ್ಲಿ ತನ್ನಿಂದ ನಡೆದ ಎಡವಟ್ಟನ್ನೂ ಅವರು ವಿವರಿಸಿದರು. ಪತ್ರಿಕೆಯೊಂದು ಅವರಲ್ಲಿ ವರದಿಯ ಅನುವಾದ ನಡೆಸುವಂತೆ ಕೇಳಿತ್ತಂತೆ. ಅದೇ ರೀತಿ ಗಂಗಾಧರನ್ ಅನುವಾದಿಸಿದ ವರದಿ ಪ್ರಕಟವಾದಾಗ ಆ ಪತ್ರಿಕೆಯ ಮಾನ ಹರಾಜಾಗುವ ಪ್ರಸಂಗ ಎದುರಾಯಿತಂತೆ. ಅವರು ಅನುವಾದಿಸಿದ ಸುದ್ದಿ ಹೀಗಿದೆ: 'ಗ್ರಾಮಸ್ಥರ ಸಹಕಾರದಿಂದ ಗರ್ಭಿಣಿಯಾದ ಆ ಹೆಂಗಸಿಗೆ ಸಮಯಕ್ಕೆ ಸರಿಯಾದ ನೆರವು ಲಭಿಸಿ...'